ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ವಿಚಾರಣೆ ಒಳಪಟ್ಟಿದ್ದು ಅವರನ್ನು ಪಿಡಬ್ಲೂ-1 ಎಂದು ಪರಿಗಣಿಸಿ ಇಂದು ದಿನಾಂಕಃ 16.11.2023 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**<u>ಫಿರ್ಯಾದುದಾರರ ಮುಖ್ಯ ವಿಚಾರಣೆಃ</u>** ಪಿರ್ಯಾದಿಯ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ವಿಷಯಗಳು ಸರಿಯಾಗಿದ್ದು, ನಾನೇ ಓದಿ ತಿಳಿದು ಸಹಿ ಮಾಡಿರುತ್ತೇನೆ.

ಸದರಿ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ, ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

1. ಆರೋಪಿ ನೀಡಿರುವ ಚೆಕ್ಕು ನಿಪಿ.1 ಮತ್ತು ಅದರಲ್ಲಿರುವ ಆರೋಪಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.
2. ದಿನಾಂಕಃ 06.01.2022 ರಂದು ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಮೂಡಿಗೆರೆ ಶಾಖೆಯವರು ನೀಡಿರುವ ಹಿಂಬರಹವನ್ನು ನಿಪಿ.2,
3. ದಿನಾಂಕಃ 20.01.2023 ರಂದು ವಕೀಲರ ಮೂಲಕ ನೀಡಿರುವ ನೋಟೀಸ್‌ನ ಕಛೇರಿ ಪ್ರತಿಯನ್ನು ನಿಪಿ.3,
4. ಅಂಚೆ ರಶೀದಿ ಮತ್ತು ಸ್ವೀಕೃತಿಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

ಆದ್ದರಿಂದ ಆರೋಪಿ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕಾಗಿ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ.

**<u>ಪಾಟೀ ಸವಾಲುಃ</u>**ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.

(ದಿನಾಂಕಃ 16.11.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಸಹಿ/-**
**ಪಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ.**
**ಓ ಹೇ ಕೇ ಸ ಇ ಎ ಒ** **ಮೂಡಿಗೆರೆ**